ಕೂಟಗಲ್ ನಾಡ ಕಛೇರಿ ಅಧಿಕಾರಿಗಳಿಂದ ರೈತರಿಗೆ ಕಿರುಕುಳ

೪೨೨. ಶ್ರೀ ಎಂ. ನಾರಾಯಣಸ್ವಾಮಿ, (ಬೇತಮಂಗಲ).— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಮನಗರ ತಾಲ್ಲೂಕು ಕೂಟಗಲ್ ಹೋಬಳಿಯಲ್ಲಿ ನಾಡ ಕಚೇರಿ ಇದೆಯೇ ?

ಆ) ನಾಡಕಚೇರಿ ಇದ್ದಲ್ಲಿ, ಆ ಕಚೇರಿಯ ಸೆಕ್ರೆಟರಿ ಉಪ ತಹಶೀಲ್ದಾರ್ ಇವರುಗಳು ರೈತರಿಗೆ ಹಾಗೂ ಜಮೀನುದಾರರಿಗೆ ಬಾತೆ ಮಾಡುವಲ್ಲಿ ಹಾಗೂ ಪಹಣಿ ಬರೆಯುವ ಬಗ್ಗೆ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಬಗ್ಗೆ ಸರ್ಕಾರವು ಸಂಬಂಧಪಟ್ಟ ನೌಕರರ ಮೇಲೆ ವಿಚಾರಣೆ ನಡೆಸಿ ಸೂಕ್ತಕ್ರಮ ತೆಗೆದುಕೊಂಡಿರುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಈ ನಾಡ ಕಚೇರಿಯು ಸಿಬ್ಬಂದಿಯ ಬಗ್ಗೆ ಈ ತರಹದ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಪೆಚ್. ಕೌಜಲಗಿ (ಮಾನ್ಯ ಎಂ. ನಾರಾಯಣಸ್ವಾಮಿ. (ಬೇತಮಂಗಲ) ಇವರ ಪರವಾಗಿ).— ಮಾನ್ಯ ಅಧ್ಯಕ್ಷರೇ, ರಾಮನಗರ ತಾಲ್ಲೂಕು ಕೂಟಗಲ್ ಹೋಬಳಿಯ ನಾಡ ಕಚೇರಿ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅಲ್ಲಿ ಇರತಕ್ಕಂಥ ಗ್ರಾಮ ಲೆಕ್ಕಿಗರು ಹಾಗೂ ಅಲ್ಲಿನ ಉಪ ತಹಶೀಲ್ದಾರ್ ಕಚೇರಿಯಲ್ಲಿ ಅನ್ಯಾಯವಾಗುತ್ತಿದೆ ಎಂದು ಕೇಳಿದ್ದೀವೆ. ಮೊದಲನೆಯಂದಾಗಿ, ಇವರಂ ಕೆಲವು ಜಮೀನುಗಳನ್ನು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ. ಸರ್ಕಾರದ ಜಮೀನನ್ನು ೧೯೪೪ನೇ ಇಸವಿಯಿಂದ ಮೊದಲು ಯಾರು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ, ಇದು ಅವರ ಹೆಸರಿಗೆ ಹೋಗ ಬೇಕು ಎಂದು ಹೇಳಿ ನಾಡಕಚೇರಿಯ ಸೆಕ್ರೆಟರಿ ಮತ್ತು ಉಪತಹಶೀಲ್ದಾರ್–ಇವರುಗಳು ಸರ್ಕಾರದ ಜಮೀನನ್ನು ಹೊಡೆಯುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆ ಸರ್ವೆ ನಂಬರು ಈ ರೀತಿ ಯಾಗಿವೆ. ೨೧೫(೧), ೨೧೭(೨), ೨೧೮.೨೧೯. ಈ ಸರ್ವೆ ನಂಬರಿನಲ್ಲಿ ಬೇರೆ ಬೇರೆ ಹೆಸರಿನಲ್ಲಿ ಹಿಂದಿನ ತಾರೀಖಿನ್ನು ಹಾಕಿ ಎಂಟ್ರಿ ಮಾಡುವುದಕ್ಕೆ, ತಿದ್ದುವುದಕ್ಕೆ ಈ ಮೇಲಿನ ಅಧಿಕಾರಿಗಳು ಹೊರಟಿದ್ದಾರೆ. ಇದೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಇದು ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿದೆ. ನಿಯಮ ೪೩ಗಿ ರಲ್ಲಿ ಮಾಗಡಿಯ ಶಾಸಕರಾದ ಮಾನ್ಯ ರೇವಣ್ಣನವರು ಇದರ ಬಗ್ಗೆ ಕೇಳಿದ್ದರು. ಇದಕ್ಕೆ ಮೊದಲು ನಮಗೆ ಯಾರ ವಿರುದ್ಧ ಕಂಪ್ಲೆಂಟ್ಸ್ ಬಂದಿತ್ತು, ಅವರುಗಳನ್ನು ಈಗಾಗಲೇ ವರ್ಗಾವಣೆ ಮಾಡಲಾಗಿದೆ. ಮತ್ತು ಸಸ್ಪೆನ್‌ಷನ್‌ನಲ್ಲಿ ಕೂಡಾ ಇಡಲಾಗಿದೆ. ಈ ವಿಷಯ ಈಗಾಗಲೇ ಮುಕ್ತಾಯವಾಗಿದೆ.

ಶ್ರೀ ಶಿವಾನಂದ ಪೆಚ್. ಕೌಜಲಗಿ. — ಇವರುಗಳು ಜಮೀನುಗಳನ್ನು ಬೇರೆಯವರ ಹೆಸರಿಗೆ ಮಾಡಿಕೊಡುವುದಕ್ಕೆ ೧೯೪೪ನೇ ಇಸವಿಯ ಎಂಟ್ರೀಸ್‌ನ್ನು ಬದಲು ಮಾಡಿದ್ದಾರೆ. ರೆಕಾರ್ಡ್‌ನಲ್ಲಿ ನೋಡಿದಾಗ ನಿಜವಾಗಿ ಸಿಕ್ಕ ತಕ್ಕಂಥ ಜನರಿಗೆ ಸಿಗುವುದಿಲ್ಲ. ಇದರಿಂದ ಬಹಳ ಜನರಿಗೆ ಅನ್ಯಾಯ ವಾಗುತ್ತದೆ. ಅದಕಾರಣ ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲಿ ಅವರುಗಳು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ತೊಂದರೆ ಇದೆ ? ತಪ್ಪು ಮಾಡದಿದ್ದರೆ ಕ್ರಮ ತೆಗೆದುಕೊಳ್ಳುವುದು ಬೇಡ. ಇಲ್ಲಿ ತಪ್ಪು ಮಾಡಿರುವುದರಿಂದ ಅವರುಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಅವರುಗಳ ಮೇಲೆ ಎನ್‌ಕ್ವೈರಿ ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅವರಲ್ಲಿರತಕ್ಕಂಥ ಕಾಗದ ಪತ್ರಗಳನ್ನು ಮತ್ತು ಸರ್ವೆ ನಂಬರುಗಳನ್ನು ಕಳುಹಿಸಿಕೊಡಲಿ, ನಾನು ತಕ್ಷಣವೇ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿರುವ ಬಗ್ಗೆ

೨೪೯. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಲಂಬಾಣಿ ತಾಂಡಾಗಳ ಸಂಖ್ಯೆ ಎಷ್ಟು?

ಆ) ಇವುಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಇ) ಈ ತೊಂದರೆಗಳನ್ನು ಯಾವಾಗ ಬಗೆಹರಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಸುಮಾರು ೧,೯೧೦

ಆ) ೧೯೯೧ ರ ಜನಗಣತಿ ಕಾರ್ಯವು ಸಂಪೂರ್ಣಗೊಳ್ಳುವವರೆಗೆ ಅಂದರೆ ದಿನಾಂಕ ೩೦-೬-೯೧ ರವರೆಗೆ ಯಾವುದೇ ಗ್ರಾಮಗಳ ಪಟ್ಟಣಗಳ ಗಡಿಗಳನ್ನು ಬದಲಾಯಿಸಬಾರದೆಂದು ಕೇಂದ್ರ ಸರ್ಕಾರದ ಸೂಚನೆ ಇರುವುದರಿಂದ, ಸದ್ಯಕ್ಕೆ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಪ್ರಸ್ತಾವನೆಯನ್ನು ಮುಂದೂಡಲಾಗಿದೆ.

ಇ) ೧೯೯೧ರ ಜನಗಣತಿ ಕೆಲಸ ಪೂರ್ಣಗೊಂಡ ನಂತರ ಪರಿಶೀಲಿಸಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ ಲಂಬಾಣಿ ತಾಂಡಾಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸುತ್ತೇವೆ ಎಂದು ಹಿಂದಿನ ಕಂದಾಯ ಸಚಿವರು ಆರೇಳು ತಿಂಗಳ ಹಿಂದೆಯೇ ಭರವಸೆಯನ್ನು ಕೊಟ್ಟಿದ್ದರು. ಆದರೆ ಇಲ್ಲಿ ಉತ್ತರದಲ್ಲಿ ೧೯೯೧ರ ಜನಗಣತಿಯ ನಂತರ ಇದನ್ನು ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಹೊಸ ಮಂತ್ರಿಗಳು ಹೇಳಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಬಹಳಷ್ಟು ವರ್ಷಗಳಿಂದ ಪರಿಶೀಲನೆಯಲ್ಲಿದೆ. ಬಹುಶಃ ತಾವು ಹಿಂದೆ ಕಂದಾಯ ಸಚಿವರಾಗಿದ್ದಾಗ ಪರಿಶೀಲನೆಯಲ್ಲಿದೆ ಎಂಬ ಭರವಸೆಯನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದೇನೆ. ಮತ್ತೆ ನಮ್ಮ ರಾಜ್ಯದಲ್ಲಿ ಸುಮಾರು ನಾಲ್ಕು ತಾಲ್ಲೂಕುಗಳಿಗೆ ಕೊನೆಯ ಪಕ್ಷ ಹತ್ತು ತಾಂಡಾಗಳು ಬರುತ್ತವೆ. ಎರಡು ಸಾವಿರ ತಾಂಡಾಗಳು ಇವೆ. ನಾನು ಕೇಳುವುದೇನೆಂದರೆ, ಖಚಿತವಾಗಿ ಮುಂದಿನ ವರ್ಷ ಜನಗಣತಿ ಆಗುವುದು ಆಗುತ್ತದೆ. ಸಾಮಾನ್ಯವಾಗಿ ಜನಗಣತಿ ೧೯೯೧ರ ಜನವರಿಯಲ್ಲಿ ಆಗುತ್ತದೆ. ಅದು ಆದ ನಂತರ ಪರಿಶೀಲನೆ ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬಹುದಾ? ಎರಡನೆಯದು, ಅಲ್ಲಿಯವರಿಗೆ ಸಣ್ಣ ರೆವಿನ್ಯೂ ಗ್ರಾಮಕ್ಕೆ ಸಿಗುತ್ತಾ ಇರತಕ್ಕ ಫೆಸಿಲಿಟೀಸ್ ಏನು ಇದೆ, ಅದನ್ನು ಎಕ್ಸ್‌ಟೆಂಡ್ ಮಾಡಲಿಕ್ಕೆ ಸಾಧ್ಯ ಆಗುತ್ತದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೆ ಒಂದು ಸಲ ರೆವಿನ್ಯೂ ವಿಲೇಜ್ ಎಂದು ಡಿಕ್ಲೇರ್ ಮಾಡಿದ ಮೇಲೆ ಫೆಸಿಲಿಟೀಸ್ ಆಟೋಮ್ಯಾಟಿಕ್ ಆಗಿ ಬರುತ್ತವೆ. ವಿಲೇಜ್ ಅಕೌಂಟೆಂಟ್‌ನಗಳ ಪೋಸ್ಟ್ ಬರುತ್ತವೆ, ಎರಡು ತಾಂಡಾಗಳ ಮೇಲೆ ಕೆಲವಾದರೂ ಫೆಸಿಲಿಟೀಸ್‌ಗಳು ಬರುತ್ತವೆ. ಫೇರ್ ಪ್ರೈಸ್ ಶಾಪ್ಸ್, ಇಂಡಿಪೆಂಡೆಂಟ್ ಆಗಿ ಕೊಡತಕ್ಕಂಥಾದ್ದು ಬರಬಹುದು. ಈಗಾಗಲೇ ಹೇಳಿದ ಹಾಗೆ ಕೆಲವೊಂದು ನಾರ್ಮ್ಸ್‌ಗಳನ್ನು ಮಾಡಿಕೊಂಡಿದ್ದೇವೆ. ಐದು ನೂರು ಅಥವಾ ಅದಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇರಬೇಕು. ಒಂದು ನೂರಕ್ಕಿಂತ ಹೆಚ್ಚು ಕುಟುಂಬಗಳು ಅಲ್ಲಿ ವಾಸಿಸುವಂತೆ ಇರಬೇಕು. ೧೫೦೦ ಎಕರೆಗಿಂತ ಮೇಲ್ಪಟ್ಟ ತಾಂಡಾಗಳಿಗೆ ಮಾತ್ರ ಈ ವಿಲೇಜ್‌ನಲ್ಲಿ ಇನ್‌ಕ್ಲೂಡ್ ಮಾಡಬೇಕು ಮತ್ತು ಈಗಾಗಲೇ ಖಾಲಿ ಇರುವ ಪಕ್ಕದ ಗ್ರಾಮಗಳಲ್ಲಿ ತಾಂಡಾಗಳು ಇದ್ದರೆ ಅದನ್ನು ಇಂಡಿಪೆಂಡೆಂಟ್ ವಿಲೇಜ್ ಎಂದು ಮಾಡುವುದಕ್ಕೆ ಆಗುವುದಿಲ್ಲ. ಮಂಡಲ್ ಪಂಚಾಯಿತಿ ಒಪ್ಪಿಗೆ ಕೂಡ ಇದಕ್ಕೆ ಬೇಕು. ಹೀಗೆ ಐದು ಕ್ರೈಟೀರಿಯಾಗಳನ್ನು ಫಿಕ್ಸ್ ಮಾಡಿದ್ದೇವೆ. ಈ ಕ್ರೈಟೀರಿಯಾದಲ್ಲಿ ಬರತಕ್ಕ ಎಲ್ಲ ತಾಂಡಾಗಳಿಗೆ ರೆವಿನ್ಯೂ ವಿಲೇಜಸ್ ಎಂದು ಡಿಕ್ಲೇರ್ ಮಾಡಬೇಕು ಎಂಬ ಒಂದು ಯೋಜನೆ ಇದೆ. ಆದರೆ ಕೇಂದ್ರ ಸರ್ಕಾರದವರು ಸೆನ್ಸಸ್ ಮಾಡುವವರೆಗೆ ಅಂದರೆ ೧-೬-೯೧ ರವರೆಗೆ ಯಾವುದೇ ತಾಲ್ಲೂಕು ಆಗಲಿ, ಜಿಲ್ಲೆಯಾಗಲೀ ವಿಲೇಜ್ ಬೌಂಡರಿಗಳನ್ನು ಅಲ್ಟರೇಷನ್ ಮಾಡಬಾರದು ಎನ್ನತಕ್ಕ ಆದೇಶವನ್ನು ಕೊಟ್ಟಿದ್ದಾರೆ. ಸೆನ್ಸಸ್ ಆದ ಮೇಲೆ ಇದರ ಬಗ್ಗೆ ಪರಿಶೀಲನೆ ಮಾಡಿ ಅಲ್ಲಿ ಎಷ್ಟು ತೀವ್ರಗತಿಯಿಂದ ಮತ್ತು ಎಷ್ಟು ಸಾಧ್ಯ ಇದೆ ಅಷ್ಟನ್ನು ಮಾಡತಕ್ಕ ಪ್ರಯತ್ನವನ್ನು ನಾವು ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡತಕ್ಕ ಭರವಸೆಯನ್ನು ಕೊಟ್ಟಿದ್ದಾರೆ. ನಾನಾದರೂ ಕೇಳುವುದು ಏನು ಅಂದರೆ, ಜನಗಣತಿ ಆಗುವುದರಿಗೂ ಅಲ್ಟರೇಷನ್ ಮಾಡಬಾರದು ಎಂದು ಕೇಂದ್ರ ಸರ್ಕಾರದವರು ಈ ಸರ್ಕಾರಕ್ಕೆ ಸೂಚನೆ ಕೊಟ್ಟಿರುವುದರಿಂದ ಕಾನೂನು ಬದ್ಧವಾಗಿ ಅದನ್ನು ಮಾಡಲಿಕ್ಕೆ ಆಗದೇ ಇರಬಹುದು. ಆದರೆ ತಾವು ಈಗಾಗಲೇ ಕೆಲವು ಕ್ರೈಟೀರಿಯಾಗಳನ್ನು ಫಿಕ್ಸ್ ಮಾಡಿಕೊಂಡಿದ್ದೇವೆ. ಸರ್ವೇಯನ್ನು ಮಾಡಿಕೊಂಡಿದ್ದೇವೆ, ಎಂದು ನೂರಕ್ಕಿಂತ ಹೆಚ್ಚು ಪಾಪ್ಯುಲೇಷನ್ ಇರತಕ್ಕ ತಾಂಡಾಗಳು ಇವೆ ಎಂದು ಹೇಳಿದ್ದೀರಿ. ಮಾನ್ಯ ಸಂಜಾಂಡಪ್ಪಾಮಿರವರು ರಿಮೋಟ್ ಕಂಟ್ರೋಲ್ ಆಗಿ ಸ್ಯಾಟ್‌ಲೈಟ್‌ಗಳು ಕೆಲವು ಹಳ್ಳಿಗಳಲ್ಲಿ ಇವೆ ಎಂದು ಹೇಳಿದರು. ವಿಲೇಜ್ ಅಕೌಂಟೆಂಟ್‌ಗಳು ಲಂಬಾಣಿ ತಾಂಡಾಗಳಿಗೆ ಹೋಗಿಲ್ಲ ಸೆನ್ಸಸ್ ಮಾಡುವವರೂ ಇಲ್ಲ. ಒಂದು ಸಾವಿರ, ಎರಡು ಸಾವಿರ ಜನಸಂಖ್ಯೆ ಇರುವ ಕಡೆ ಮೂನ್ನೂರು ನಾನ್ನೂರು ಎಂದು ಬರೆದುಕೊಂಡು ಬಂದಿದ್ದಾರೆ. ಇದನ್ನು ಎಲ್ಲೋ ಒಂದು ಕಡೆ ಕುಳಿತುಕೊಂಡು ಬರೆದಿದ್ದಾರೆ. ಇದು ನನಗಿಂತ ಚೆನ್ನಾಗಿ ತಮಗೆ ಗೊತ್ತು, ಕೆಲವು ಲಂಬಾಣಿ ತಾಂಡಾಗಳಲ್ಲಿ ಎರಡು ಸಾವಿರ ಮೂರು ಸಾವಿರ ಪಾಪ್ಯುಲೇಷನ್ ಇದ್ದರೂ ಇನ್ನೂ ಕೂಡ ರೆವಿನ್ಯೂ ವಿಲೇಜಸ್ ಎಂದು ಮಾಡಬೇಕಾಗಿಲ್ಲ. ಲಾ ಡಿಪಾರ್ಟ್‌ಮೆಂಟ್ ಕನ್‌ಕರೆನ್ಸ್ ಕೊಡಬೇಕು, ಮತ್ತೊಂದು ಡಿಪಾರ್ಟ್‌ಮೆಂಟ್ ಕನ್‌ಕರೆನ್ಸ್ ಕೊಡಬೇಕು ಅಂದರೆ ಬಹಳ ತಪ್ಪವಾಗುತ್ತದೆ. ನಾನು ಕೇಳಿಕೊಳ್ಳುವುದು ಏನು ಅಂದರೆ, ಈಗ ಕೆಲವು ಫೆಸಿಲಿಟೀಸ್‌ನು ಕೆಲವು ಬೇರೆ ರೆವಿನ್ಯೂ ಗ್ರಾಮಗಳು ಇನ್ನು ಎಂಜಾಯ್ ಮಾಡುತ್ತಿವೆ, ಎರಡು ಸಾವಿರ ಜನ ಸಂಖ್ಯೆ ಇರುವ ತಾಂಡಾಗಳಿಗೆ ಕೆಲವೊಂದು ಕ್ರೈಟೀರಿಯಾಗಳನ್ನು ಫುಲ್‌ಫಿಲ್ ಮಾಡಿರುವುದು ಇದೆ ಎಂದು ಹೇಳಿದ್ದೀರಿ. ಅವಕ್ಕೆ ಏಕ ತಕ್ಷಣ ಫೆಸಿಲಿಟೀಸ್‌ಗಳನ್ನು ಎಕ್ಸ್‌ಟೆಂಡ್ ಮಾಡಬಾರದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಕೂಡ ಅದನ್ನೇ ಹೇಳಿದೆ. ರೆವಿನ್ಯೂ ವಿಲೇಜ್ ಎಂದು ಡಿಕ್ಲೇರ್ ಮಾಡಿದರೆ ಎಲ್ಲಾ ಕಡೆ ಪೋಸ್ಟ್ ಕ್ರಿಯೇಟ್ ಮಾಡುವುದಕ್ಕೆ ಅವಕಾಶವಾಗುತ್ತದೆ. ತಮಗೆ ಗೊತ್ತಿದೆ. ಕೆಲವು ಹ್ಯಾಮ್ಲೆಟ್ ವಿಲೇಜಸ್ ಇರುತ್ತವೆ, ಅವಕ್ಕೆ ಕೂಡ ಅನೇಕ ಸಲ ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಆಗುವುದಿಲ್ಲ. ಕೆ.ಇ.ಬಿ.ಯವರು ರೆವಿನ್ಯೂ ವಿಲೇಜಸ್‌ಗೆ ಮಾತ್ರ ಎಲೆಕ್ಟ್ರಿಸಿಟಿ ಕೊಡುತ್ತಾರೆ. ಆದರೆ ಆದರ ಪಕ್ಕದಲ್ಲಿರತಕ್ಕ ಪಾಡಾಗಳಿಗೆ ಆಗಲಿ ಅಥವಾ ಹ್ಯಾಮ್ಲೆಟ್‌ಗಳಿಗಾಗಲೀ ಎಲೆಕ್ಟ್ರಿಸಿಟಿ ಕೊಡುವದಿಲ್ಲ. ಸುಮ್ಮನೆ ನೀವು ಕೇಳಿದಿರಿ ಎಂದು ಎಲ್ಲಾ ಮಾಡಿ ಕೊಡುತ್ತೇನೆ ಎಂದು ಹೇಳಿದರೆ ಚೆನ್ನಾಗಿರುವುದಿಲ್ಲ- ಅದನ್ನು ಪರಿಶೀಲಿಸಿ ಖಂಡಿತವಾಗಿ ಮಾಡುತ್ತೇನೆ. ತಮಗೆ ಇವರ ಬಗ್ಗೆ ಎಷ್ಟು ಆಸೆ ಇದೆಯೋ ನಮಗೂ ಸಹ ಅಷ್ಟೇ ಆಸೆ ಇದೆ. ಇದು ಆಗಬೇಕು ಎಂದು ಆಸೆ ಇದೆ. ಆದಷ್ಟರಿಂದ ಆದಷ್ಟು ತೀವ್ರಗತಿಯಿಂದ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ನಾಯಕರ ಕೇಳಿದಂತಹ ಪ್ರಶ್ನೆಗೆ ಆನಂಗುವಾಗಿ ಬಿದರ್, ಗುಲ್ಬರ್ಗಾ ಜಿಲ್ಲೆಯಲ್ಲಿ ಸಾಕಷ್ಟು ಲಂಬಾಣಿ ತಾಂಡಾದ ಜನ ಗುಡ್ಡಗಾಡು ಪ್ರದೇಶಗಳಲ್ಲಿರತಕ್ಕಂಥ ಪರಿಸ್ಥಿತಿ ಇದೆ. ಹಿಂದಿನ ಕಂದಾಯ ಮಂತ್ರಿಗಳಾಗ ಮಾನ್ಯ ಬೊಮ್ಮಾಯಿಯವರು ಹೇಳಿದ್ದರು. ಹಿಂದಿನ ಕಂದಾಯ ಮಂತ್ರಿಗಳು ಕೂಡ ಎಲ್‌ಎ ಕ್ವೆಶ್ಚನ್‌ನಲ್ಲಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಕಂದಾಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಪರಿಶೀಲನೆ-ಪರಿಶೀಲನೆ ಎಂದು ಮೂರು ನಾಲ್ಕು ವರ್ಷಗಳಿಂದ ಕೇಳಿ ಕೊಂಡು ಬಂದಿದ್ದೇವೆ. ಇವರ ಬಗ್ಗೆ ನಿರ್ದಿಷ್ಟವಾದ ಒಂದು ಘೋರಣೆಯನ್ನು ಯಾವಾಗ ತಾಳುತ್ತೀರಿ? ಎಂಬ ಬಗ್ಗೆ ಹೇಳಿಕೆಯನ್ನು ನೀಡಿದರೆ ಆ ಜನರಿಗೆ ಒಳ್ಳೆಯದಾಗುತ್ತದೆ ಎಂಬ ಭಾವನೆ ಇದೆ. ಅವರು ವಿಶೇಷವಾಗಿ ಬಹಳ ಹಿಂದುಳಿದ ಪ್ರದೇಶದಲ್ಲಿ ಇದ್ದಾರೆ. ಅವರಿಗೆ ಯಾವುದೇ ರೀತಿಯ ಸವಲತ್ತುಗಳು ಇಲ್ಲ. ಇಷ್ಟು ದಿವಸದಲ್ಲಿ ಮಾಡುತ್ತೇವೆ ಎಂದು ಹೇಳಬೇಕು ಮಾನ್ಯ ಮಂತ್ರಿಗಳು ನಮ್ಮ ಭಾಗದವರು ಇದ್ದಾರೆ. ಅವರಿಗೂ ಕಳಕಳಿ ಇದೆ. ಆದ್ದರಿಂದ ಅತೀ ಶೀಘ್ರವಾಗಿ ಈ ಲಂಬಾಣಿ ತಾಂಡಾಗಳನ್ನು ಗ್ರಾಮಗಳನ್ನಾಗಿ ಪರಿವರ್ತಿಸತಕ್ಕ ಕಾರ್ಯವನ್ನು ಅಥವಾ ಘೋರಣೆಯನ್ನು ನಿರ್ದಿಷ್ಟವಾಗಿ ಹಾಕಿಕೊಳ್ಳುತ್ತಿರಾ? ಇದರ ಬಗ್ಗೆ ಸ್ವಲ್ಪ ಮಾಹಿತಿ ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಈಗಾಗಲೇ ನಾನು ಹೇಳಿದ ಹಾಗೆ ಈಗ ಜೂನ್ ೧೯೮೧ ರವರೆಗೆ ೩೦೦ ತಾಂಡಗಳನ್ನು ರೆವಿನ್ಯೂ ವಿಲೇಜಸ್ ಆಗಿ ಕನ್‌ವರ್ಟ್ ಮಾಡುವುದು. ಉಳಿದವನ್ನು ಇನ್ನೂ ಸರ್ವೆ ಮಾಡಬೇಕಾಗುತ್ತವೆ. ಒಟ್ಟಿನಲ್ಲಿ ೧೯೮೦ ತಾಂಡಗಳಲ್ಲಿ ೩೦೦ ತಾಂಡಗಳನ್ನು ರೆವಿನ್ಯೂ ವಿಲೇಜಸ್ ಆಗಿ ಜೂನ್ ೧೯೮೧ರವರೆಗೆ ಕನ್‌ವರ್ಟ್ ಮಾಡಬಹುದು. ಈಗಾಗಲೇ ಮಾನ್ಯ ಚೌಡರೆಡ್ಡಿಯವರು ಹೇಳಿದ ಹಾಗೆ ಪಣಕಾಷ್ಟ ಇಲಾಖೆಗೆ ಫೈಲುಗಳು ಹೋಗುತ್ತವೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಹೋಗುತ್ತದೆ. ಹೀಗೆಲ್ಲಾ ಆಗುತ್ತದೆ. ಆದರೂ ಸಾಧ್ಯವಾದಷ್ಟು ಎಲ್ಲೆಲ್ಲಿ ಈ

ಒಂದು ಕೈಗಾರಿಕೆಯಾದಲ್ಲಿ ಬರತಕ್ಕಂಥ ತಾಂಡಾಗಳಿವೆ. ಅವುಗಳನ್ನು ರೆವಿನ್ಯೂ ವಿಲೇಜಸ್ ಆಗಿ ಕನ್‌ವರ್ಟ್ ಮಾಡತಕ್ಕ ಪ್ರಯತ್ನ ಸರ್ಕಾರ ಮಾಡುತ್ತದೆಂದು ಭರವಸೆಯನ್ನು ಕೊಡುತ್ತೇನೆ.

SRI A.B. JAKANUR.— What about the hamlets? ಒಂದೊಂದು ಗ್ರಾಮದಲ್ಲಿ ೮-೧೦ ಹ್ಯಾಮ್ಲೆಟ್‌ಗಳಿವೆ. ಅದರ ಬಗ್ಗೆ ಮಾನ್ಯ ಸಚಿವರು ಏನೂ ಹೇಳುತ್ತಾ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರು ಪ್ರಶ್ನೆಯನ್ನು ಕೇಳಿರುವುದು ತಾಂಡದ ಬಗ್ಗೆ. ಹ್ಯಾಮ್ಲೆಟ್ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಅಧ್ಯಕ್ಷರು.— ಈ ಪ್ರಶ್ನೆ ತಾಂಡಕ್ಕೆ ಸಂಬಂಧಪಟ್ಟಿರುವುದು. ನೀವು ಹ್ಯಾಮ್ಲೆಟ್ ಬಗ್ಗೆ ಬೇರೆ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ.

ಭೂ ನ್ಯಾಯ ಮಂಡಳಿ ಪುನರ್ ರಚನೆ ಕುರಿತು

೨೪೭. ಶ್ರೀ ಜಿ. ಎಸ್. ಆಚಾರ್ (ಬೈಂದೂರು),—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭೂ ಸುಧಾರಣೆ ಕಾಯಿದೆಯನ್ವಯ ಸ್ಥಾಪಿತವಾದ ಭೂನ್ಯಾಯ ಮಂಡಳಿಗಳ ಕಾರ್ಯ ಕಳೆದ ಒಂದು ವರ್ಷದಿಂದ ಸ್ಥಗಿತಗೊಂಡಿದ್ದು, ಇದರಿಂದ ಬಡ ಗೇಣಿದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಇ) ಅಪೀಲು ಪ್ರಾಧಿಕಾರಗಳು ರದ್ದಾದುದರಿಂದ ಆ ಪ್ರಾಧಿಕಾರದಲ್ಲಾದ ತೀರ್ಮಾನಗಳನ್ನು ಭೂ ನ್ಯಾಯ ಮಂಡಳಿಯ ಪರಿಶೀಲನೆಗೆ ಕಳುಹಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಹೌದು.

ಆ) ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಲು ಪ್ರಸ್ತಾವನೆಯನ್ನು ಕಂದಾಯ ಮಂತ್ರಿಗಳ ಮಂಡಲಾಂತರ ಮಾನ್ಯ ಮುಖ್ಯ ಮಂತ್ರಿಯವರ ಅನುಮೋದನೆಗೆ ಸಲ್ಲಿಸಲಾಗಿದೆ. ಅನುಮೋದನೆ ದೊರೆತ ನಂತರ ಅಧಿಸೂಚನೆಯನ್ನು ಹೊರಡಿಸಲಾಗುವುದು.

ಇ) ಪ್ರಾಧಿಕಾರದಲ್ಲಿ ತೀರ್ಮಾನವಾದ ಪ್ರಕರಣಗಳನ್ನು ಭೂ ನ್ಯಾಯ ಮಂಡಳಿಯ ಪರಿಶೀಲನೆಗೆ ಕಳುಹಿಸಲು ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. ಪ್ರಾಧಿಕಾರಗಳಲ್ಲಾದ ತೀರ್ಮಾನದಿಂದ ನೊಂದವರು ಉಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗಲು ಅವಕಾಶ ಇರುತ್ತದೆ.

ಶ್ರೀ ಜಿ. ಎಸ್ ಆಚಾರ್.—ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿಯೂ ಸಹ ನನ್ನ ಮಿತ್ರರು ಕೇಳಿದಾಗ ಇದೇ ಉತ್ತರ ಬಂದಿದೆ. ಭೂ ನ್ಯಾಯ ಮಂಡಳಿ ಒಂದು ವರ್ಷದಿಂದ ಕಾನ್‌ಸ್ಟಿಟ್ಯೂಟ್ ಆಗಿಲ್ಲ, ಇದು ಆಗಬೇಕು. ಇದು ಆಗದೆ ಇರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮ್ಮ ಗೇಣಿದಾರರಿಗೆ ತುಂಬಾ ತೊಂದರೆಯಾಗಿದೆ. ಆದರಿಂದ ಮುಖ್ಯ ಮಂತ್ರಿಗಳ ಪ್ರಸ್ತಾವನೆ ಹೋಗಿದೆ ಎಂದು ಕಳೆದ ಸಾಲಿನಲ್ಲಿಯೂ ಹೇಳಿದ್ದಾರೆ. ಈ ಸಾಲಿನಲ್ಲಿಯೂ ಕೂಡ ಹೇಳಿದ್ದಾರೆ. ಆ ಪ್ರಸ್ತಾವನೆಯು ಆದಷ್ಟು ಬೇಗ ಅನುಮೋದಿಸಲ್ಪಟ್ಟು ಬರಲಿ, ಜನರಿಗೆ ತೊಂದರೆಯಾಗದೆ ಇರಲಿ. ಎರಡನೆಯದಾಗಿ, ಪ್ರಾಧಿಕಾರಗಳು ರದ್ದಾದ ಮೇಲೆ ಆ ಪ್ರಾಧಿಕಾರದಲ್ಲಾದ ತೀರ್ಮಾನಗಳನ್ನು ಭೂ ನ್ಯಾಯ ಮಂಡಳಿಯ ಪರಿಶೀಲನೆಗೆ ಕಳುಹಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೆ ಎಂದು ಕೇಳಿದ್ದಕ್ಕೆ ಉತ್ತರವಲ್ಲಿ ಆ ತೀರ್ಮಾನದಿಂದ ನೊಂದವರು ಉಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗಲು ಅವಕಾಶ ಇರುತ್ತದೆಂದು ಹೇಳಿದ್ದಾರೆ. ಇಲ್ಲಿ ಇರುವ ಸಮಸ್ಯೆ ಏನೆಂದರೆ, ಪ್ರಾಧಿಕಾರ ಏಕೆ ರದ್ದಾಯಿತು, ಪ್ರಾಧಿಕಾರವು ಸಿವಿಲ್ ಪ್ರೊಸೀಜರ್ ಕೋಡ್ ಪ್ರಕಾರ ಅದರಲ್ಲಿ ತೀರ್ಮಾನವಾಗುತ್ತದೆ. ದಾಖಲೆಗಳ ಆಧಾರದ ಮೇಲೆ ಹಕ್ಕುಪತ್ರಗಳನ್ನು ಕೊಡುತ್ತಾರೆ. ಅನೇಕ ಜನ ಗೇಣಿದಾರರಿಗೆ ದಾಖಲೆ ಇಲ್ಲ ಅದ್ದರಿಂದ ಭೂ ನ್ಯಾಯ ಮಂಡಳಿಯ ಮೂಲಕ ತೀರ್ಮಾನವಾಗಬೇಕೆನ್ನುವುದು ನಿಜವಾಗಿಯೂ ಇದ್ದಂತಹ ಹಿಂದಿನ ಸರ್ಕಾರದವರು ಮಾಡಿದಂಥ ಒಂದು ಕಾನೂನು ಭೂ ನ್ಯಾಯ ಮಂಡಳಿಗಳಿಂದ ಹೈಕೋರ್ಟಿಗೆ ಅಪೀಲ್ ಹೋದಾಗ ತಿರುಗಿ ಭೂ ನ್ಯಾಯ ಮಂಡಲಿಗೆ ಬರುತ್ತಿತ್ತು. ಈಗ ಪ್ರಾಧಿಕಾರದಲ್ಲಿ ರದ್ದಾಯಿತು ಆಗಿದೆಯೆಂದರೆ, it will be upheld in the High Court.